**ಇಂದು ದಿನಾಂಕ:08.04.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

ನಾನು ಸಾಕ್ಷಿಯ ರೂಪದಲ್ಲಿ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿನ ವಿಚಾರಗಳೆಲ್ಲವೂ ಸತ್ಯವಾಗಿರುತ್ತವೆ ಮತ್ತು ಅದಕ್ಕೆ ನಾನೇ ಸಹಿ ಹಾಕಿರುತ್ತೇನೆ.

**ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರ ವಕೀಲರಿಂದಃ**

**ನಿ.ಪಿ.26–** ಸರ್ವೆ ನಂ.71 ರ ನಕ್ಷೆ

ಪ್ರತಿವಾದಿ ಪರ ವಕೀಲರು ನಕ್ಷೆಯನ್ನು ತಾಲ್ಲೂಕು ಸರ್ವೆ ಮಾಡಿಲ್ಲ ಎಂದು ತಕರಾರು ಮಾಡಿರುತ್ತಾರೆ. ತಕರಾರಿಗೆ ಒಳ ಪಟ್ಟು ದಾಖಲೆಯನ್ನು ನಿಶಾನೆಯಾಗಿ ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ.ಸಿ.ಎನ್. ವಕೀಲರಿಂದಃ**

ನಾನು ಖರೀದಿ ಮಾಡಿರುವ ಸ್ವತ್ತಿನ ಸುತ್ತಾ ಬೇಲಿ ಇತ್ತು. ನಿ.ಪಿ.26 ಅನ್ನು ದಿನಾಂಕಃ 02-02-2024 ರಂದು ಮಾಡಿಸಿದ್ದೇನೆ. ನಿ.ಪಿ.26 ರಲ್ಲಿ ದಿನಾಂಕ ನಮೂದು ಇಲ್ಲ. ನಿ.ಪಿ.26 ರಲ್ಲಿ ಮೂಲ ಸರ್ವೆ ನಂ.47 ನಮೂದು ಇಲ್ಲ. ನಿ.ಪಿ.26 ರಲ್ಲಿ 4 ಎಕರೆ ಜಮೀನಿನ ಬಗ್ಗೆ ಬರೆದಿಲ್ಲ. ನಿ.ಪಿ.26 ರಲ್ಲಿ ಜಮೀನಿನ ಆಜು ಬಾಜುದಾರರ ಬಗ್ಗೆ ನಮೂದು ಇಲ್ಲ. ಸಾಕ್ಷಿ ಸರ್ವೆ ನಂಬರ್ ಗಳು ನಮೂದು ಇದೆ ಎನ್ನುತ್ತಾರೆ. ನಿ.ಪಿ.26 ದಾವೆಗಾಗಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವೆ ಮಾಡಲು ಯಾವುದೇ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಭಾವ ಚಿತ್ರ ತೋರಿಸಿ ಅದರಲ್ಲಿ ಇರುವ ಬೋರ್ವೆಲ್ ಮತ್ತು ಮನೆ ಸರ್ವೆ ನಂ.62/14 ಗೆ ಸಂಬಂದಪಟ್ಟಿದ್ದು ಎಂದರೆ ಸರಿಯಲ್ಲ. ಬೋರ್ವೆಲ್ ಮತ್ತು ಮನೆ ಇದ್ದರೂ ಸಹಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನು ಕಬಳಿಸಲು ಸುಳ್ಳು ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.26 ಕ್ಕೆ ಮತ್ತು ದಾವೆಗೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**